◆ **80 ಮತ್ತು 90ರ ದಶಕದಲ್ಲಿ ಚಳವಳಿಗಳಿಗೆ ಸಾಂಸ್ಕೃತಿಕ ಕ್ಷೇತ್ರ ಒತ್ತಾಸೆಯಾಗಿತ್ತು. ನೀವು ಕಂಡಂತೆ ಈಗ ಆ ಪರಿಸ್ಥಿತಿ ಹೇಗಿದೆ?**

ಆ ದಶಕಗಳಿಗೆ ಹೋಲಿಸಿದರೆ ಈಗ ರಂಗಭೂಮಿಯ ಕೆಲಸಗಳು ಗುಣಾತ್ಮಕವಾಗಿ ಮತ್ತು ತಾತ್ವಿಕವಾಗಿ ಬೆಳೆದಿವೆ. ಆದರೆ ಆಗ ಇದ್ದ ಪರಿಸ್ಥಿತಿ ಈಗ ಇಲ್ಲ. ಧರ್ಮದ ಪ್ರಶ್ನೆಗಳು ಮುನ್ನೆಲೆಗೆ ಬರುತ್ತಿವೆ. ರಂಗ ನಿರ್ದೇಶಕರಾದ ಸಿಜಿಕೆ, ಪ್ರಸನ್ನ ಅವರು ರೆಪರ್ಟರಿ, ಬೀದಿ ನಾಟಕಗಳಲ್ಲಿ ಕೆಲಸ ಮಾಡುತ್ತಲೇ ಚಳವಳಿಗಳನ್ನು ಕಟ್ಟುವುದಕ್ಕೂ ಒತ್ತಾಸೆಯಾಗಿದ್ದರು.

ಆಗ ಸಾಂಸ್ಕೃತಿಕ ಕ್ಷೇತ್ರದಲ್ಲಿ ತೊಡಗಿದ್ದವರಿಗೆ ಬೀದಿಯೇ ಅತ್ಯಂತ ದೊಡ್ಡ ರೂಪಕ. ಬೀದಿಗಳಲ್ಲಿಯೇ ಬಹಳ ವಿಚಾರಗಳನ್ನು ಕಲಿಯಲಾಗುತ್ತಿತ್ತು. ಹೋರಾಟಗಾರರು ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತೊಡಗಿದವರು ಬೀದಿಗಳಲ್ಲಿಯೇ ಬೆಳೆಯುತ್ತಿದ್ದರು. ಆದರೆ ಈಗ ಪರಿಸ್ಥಿತಿಗಳು ಬದಲಾಗಿವೆ.

◆ **ಇಂದಿನ ಬಿಕ್ಕಟ್ಟಿನ ಸಂದರ್ಭದಲ್ಲಿ ರಂಗಭೂಮಿಯ ಮಹತ್ವ ಏನು?**

ಟೀವಿ ಸೇರಿದಂತೆ ಬೇರೆಬೇರೆ ಮಾಧ್ಯಮಗಳು ಆಳುವ ವರ್ಗ, ಪ್ರಭುತ್ವದ ಜತೆ ರಾಜೀ ಆಗಿರಬಹುದು. ಆದರೆ ರಂಗಭೂಮಿ ಆ ರೀತಿ ರಾಜೀ ಆಗಲು ಬರುವುದಿಲ್ಲ. ಅದು ಸಾಧುವೂ ಅಲ್ಲ. ಎಲ್ಲ ಕಲಾ ಪ್ರಕಾರಗಳಿಗಿಂತ ರಂಗಭೂಮಿ ಪರಿಣಾಮಕಾರಿ ಸಂವಹನ ಮಾಧ್ಯಮ. ರಂಗಭೂಮಿ ಪ್ರಜಾಪ್ರಭುತ್ವ ಮಾದರಿಯದು. ಅಲ್ಲಿ ಪಠ್ಯ, ವಿಷಯ, ನಟ, ನಟಿ, ನಿರ್ದೇಶಕ ಹೀಗೆ ಎಲ್ಲ ವಿಭಾಗದವರೂ ಇರುತ್ತಾರೆ. ಪ್ರೇಕ್ಷಕನೇ ಮೂಲ. ಅಲ್ಲಿ ವಿಭಿನ್ನ ಧ್ವನಿಗಳು ಇರುತ್ತದೆ. ಒಂದು ಪ್ರದರ್ಶನದಲ್ಲಿ ಪಠ್ಯ ಎಷ್ಟು ಮುಖ್ಯವೊ ನಟ, ನಟಿಯರೂ ಅಷ್ಟೇ ಮುಖ್ಯ. ಏಕ ಭಾಷೆ, ಏಕ ಸಂಸ್ಕೃತಿ ಎನ್ನುವ ಈ ಹೊತ್ತಿನಲ್ಲಿ ಬಹುತ್ವವನ್ನು ಪ್ರತಿಪಾದಿಸುವ ರಂಗಭೂಮಿ ಅತ್ಯಂತ ಮಹತ್ವದ್ದಾಗಿದೆ.

◆ **ಆದರೆ ವ್ಯವಸ್ಥೆಯ ಹುಳುಕುಗಳನ್ನು ತೋರುತ್ತಿದ್ದ ಬೀದಿ ನಾಟಕಗಳು ಇಂದು ಆ ವ್ಯವಸ್ಥೆಯ ಪ್ರಚಾರದ ಭಾಗವೇ ಆಗಿವೆಯಲ್ಲ?**

ಬೀದಿ ನಾಟಕ ಹುಟ್ಟಿದ್ದೇ ಸಾರ್ವಜನಿಕ, ರಾಜಕಾರಣ ಹಾಗೂ ಸಾಮಾಜಿಕ ರೀತಿ ನೀತಿಗಳನ್ನು ವಿಮರ್ಶಿಸುವುದಕ್ಕೆ. ಕಾರ್ಮಿಕರು, ರೈತರಿಗೆ ರಾಜಕಾರಣದ ತಿಳಿವಳಿಕೆ ಕೊಡುವುದಕ್ಕೆ ಹುಟ್ಟಿತು. ಆದರೆ ಆ ನಂತರ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆಯಿಂದ ಇವು ದುರ್ಬಳಕೆಯಾದವು. ಸರ್ಕಾರದ ಪರ ಕಾರ್ಯನಿರ್ವಹಿಸುವಂತೆ ಆಯಿತು. ಹಣ ಕೊಡುವುದರ ಮೂಲಕ ಬೀದಿ ನಾಟಕಗಳ ಧ್ವನಿ ಕುಗ್ಗಿಸಲಾಯಿತು. ರಂಗಭೂಮಿಯಲ್ಲಿನ ಕೆಲವು ಪ್ರಮುಖ ನಿರ್ದೇಶಕರೂ ಈ ಪ್ರಭುತ್ವ ಪರವಾದ ನಾಟಕಗಳಿಗೆ ಪಠ್ಯ ಬರೆದುಕೊಟ್ಟರು!

ಇಂದಿನ ದಿನಗಳಲ್ಲಿ ಬೀದಿ ನಾಟಕಗಳ ಬಗ್ಗೆ ಅಷ್ಟೊಂದು ವಿಶ್ವಾಸ ಇಲ್ಲ. ವಿದ್ಯುತ್ ಶುಲ್ಕವನ್ನು ನಿಗದಿತ ಕಾಲಾವಧಿಯೊಳಗೆ ಪಾವತಿಸಬೇಕು ಎಂದು ಹಿರಿಯೂರು, ತಿಪಟೂರಿನ ಕೆಲಸ ಭಾಗಗಳಲ್ಲಿ ಬೀದಿ ನಾಟಕ ಪ್ರದರ್ಶಿಸಲಾಯಿತು. ಆಗ ರೈತರು, 'ನಮಗೆ ಸಮರ್ಪಕ ವಿದ್ಯುತ್ ನೀಡುತ್ತಿಲ್ಲ. ಇದರಿಂದ ಬೆಳೆ ನಷ್ಟವಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿ ನಾಟಕ ಪ್ರದರ್ಶನವನ್ನು ತಡೆದರು.

◆ **ಈ ಹಿಂದಿನ ದಿನಗಳಿಗೆ ಹೋಲಿಸಿದರೆ ರಂಗಭೂಮಿಗೆ ಹೆಚ್ಚು ಯುವ ಸಮುದಾಯ ಬರುತ್ತಿದೆ. ಆದರೆ ಅದರಲ್ಲೇ ಉಳಿದು ಕೆಲಸ ಮಾಡುವವರ ಸಂಖ್ಯೆ ಕಡಿಮೆ ಆಗುತ್ತಿದೆ...**

ಈಗ ಮನರಂಜನಾ ವಾಹಿನಿಗಳಲ್ಲಿ ಅವರಿಗೆ ಅವಕಾಶಗಳು ಹೆಚ್ಚಿವೆ. ತಂತ್ರಜ್ಞಾನ ಮುಂದುವರಿದಿದೆ. ಹೊಸ ತಂತ್ರಜ್ಞಾನವನ್ನು ಯುವ ಸಮುದಾಯವು ಸಮರ್ಥವಾಗಿ ಸದ್ಬಳಕೆ ಮಾಡಿಕೊಳ್ಳುತ್ತಿದೆ. ಈ